ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ:ಇ-ಆಡಳಿತ:ಶಿ.ಸಾ.ವ:2020-21

ದಿನಾಂಕ:-27-11-2020

**-: ಜ್ಞಾಪನಾ :-**

ವಿಷಯ:- ಶಿಕ್ಷಕರ ಮನವಿಯಂತೆ ತಪ್ಪು ಮಾಹಿತಿಯೊಂದಿಗೆ ಸಲ್ಲಿಸಿರುವ ವರ್ಗಾವಣೆ ಅರ್ಜಿಗಳನ್ನು ರದ್ದುಪಡಿಸುವ ಬಗ್ಗೆ.

------

ಶಿಕ್ಷಕರ ಸಾಮಾನ್ಯ ವರ್ಗಾವಣೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭವಾಗಿದ್ದು, ಕೆಲವು ಶಿಕ್ಷಕರು ತಮ್ಮ ಅರ್ಜಿಯಲ್ಲಿ ಅಪೂರ್ಣ/ತಪ್ಪು ಮಾಹಿತಿಯೊಂದಿಗೆ ಸಲ್ಲಿಸಿದ್ದು ತಿದ್ದುಪಡಿಗೆ ಅಥವಾ ಅರ್ಜಿ ಮರುಸಲ್ಲಿಕೆಗೆ ಅವಕಾಶ ನೀಡಲು ಕೋರಿ ಈ ಕಛೇರಿಗೆ ಮನವಿ ಸಲ್ಲಿಸುತ್ತಿದ್ದಾರೆ. ಶಿಕ್ಷಕರ ಮನವಿಯಂತೆ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ.

ವರ್ಗಾವಣೆ ಅರ್ಜಿಯನ್ನು ರದ್ದುಪಡಿಸುವ ಅಗತ್ಯವಿರುವ ಶಿಕ್ಷಕರು EEDS ಲಾಗಿನ್ ನಲ್ಲಿ ತಮ್ಮ ವರ್ಗಾವಣೆ ಅರ್ಜಿಯನ್ನು ತೆರೆದು ಕೊನೆಯಲ್ಲಿ ಇರುವ **Request for Delete Application** ಅನ್ನು ಕ್ಲಿಕ್ ಮಾಡುವ ಮೂಲಕ ಮನವಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಶಿಕ್ಷಕರು ಆನ್ ಲೈನ್ ಮೂಲಕ ಸಲ್ಲಿಸಿದ ಮನವಿಯನ್ನು ಪರಿಶೀಲಿಸಿ ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರ ಲಾಗಿನ್ ನಲ್ಲಿ **Approve/Reject Delete Application Request** ಮೂಲಕ ಅನುಮೋದಿಸಿದಲ್ಲಿ ಆ ಶಿಕ್ಷಕರು ಈಗಾಗಲೇ ಸಲ್ಲಿಸಿದ ವರ್ಗಾವಣೆ ಅರ್ಜಿಯು ರದ್ದಾಗಿ ಹೊಸದಾಗಿ ಅರ್ಜಿ ಸಲ್ಲಿಸಲು ಅನುಕೂಲವಾಗುವುದು. ಸದರಿ ಪ್ರಕ್ರಿಯೆಗೆ ದಿನಾಂಕ:-30-11-2020 ರಂದು ಸಂಜೆ 5-00 ಗಂಟೆಯವರೆವಿಗೆ ಮಾತ್ರ ಅವಕಾಶ ನೀಡಲಾಗಿದ್ದು, ಶಿಕ್ಷಕರ ಮನವಿ ಬಂದ ಕೂಡಲೇ ಉಪನಿರ್ದೇಶಕರ ಕಛೇರಿಯಲ್ಲಿ ಕ್ರಮವಹಿಸಲು ತಿಳಿಸಿದೆ.

**ನಿರ್ದೇಶಕರು**
**ಉರ್ದು ಹಾಗೂ ಇತರೆ ಭಾಷಾ ಅಲ್ಪಸಂಖ್ಯಾತ ಶಾಲೆಗಳ ನಿರ್ದೇಶನಾಲಯ**

ಪ್ರತಿಯನ್ನು

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು., ಇವರಿಗೆ ಮಾಹಿತಿಗಾಗಿ.
2. ಅಪರ ಆಯುಕ್ತರು, ಧಾರವಾಡ ಮತ್ತು ಕಲ್ಬುರ್ಗಿ ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
3. ನಿರ್ದೇಶಕರು(ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು., ಇವರಿಗೆ ಮಾಹಿತಿಗಾಗಿ
4. ನಿರ್ದೇಶಕರು(ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು., ಇವರಿಗೆ ಮಾಹಿತಿಗಾಗಿ
5. ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ
6. ಕಛೇರಿ ಪ್ರತಿ